

# ಕಚೇರಿ ಸಿಬ್ಬಂದಿಗಳಿಗೆ ಆಧುನಿಕ ತಂತ್ರಜ್ಞಾನ ಬಳಕೆ ಕಾರ್ಯಾಗಾರ

**ಶಿರಸಿ ಸಮಾಚಾರ ⏭ ಹಳಿಯಾಳ:** ಇಲ್ಲಿನ ಕೆಎಲ್‌ಎಸ್ ವಿಡಿಐಟಿ ಸಿಬ್ಬಂದಿಗಳಿಗೆ ಕಚೇರಿ ಕೆಲಸಕ್ಕೆ ಪೂರಕವಾಗುವ ಆಧುನಿಕ ತಂತ್ರಜ್ಞಾನ ಬಳಕೆಯ ಕುರಿತು ಮಾಹಿತಿ ನೀಡುವ ಕಾರ್ಯಾಗಾರವನ್ನು ಇತ್ತೀಚೆಗೆ ಆಯೋಜಿಸಿತ್ತು. ಮಹಾವಿದ್ಯಾಲಯದ ಟ್ರೈನಿಂಗ್ ಅಂಡ್ ಪ್ಲೇಸ್ಮೆಂಟ್ ಸಂಚಾಲಕ ಪ್ರೊ. ರಜತ್ ಆಚಾರ್ಯ ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿದ್ದರು.

ದಿನನಿತ್ಯದ ಕಚೇರಿ ಕೆಲಸವನ್ನು ಸುಲಭಗೊಳಿಸಲು ಆಧುನಿಕ ತಂತ್ರಜ್ಞಾನವಾದ ಕೃತಕ ಬುದ್ಧಿಮತ್ತೆಯನ್ನು ಹೇಗೆ ಬಳಸಬೇಕು ಎಂದು ವಿವರಿಸಿದರು. ನೂತನ ತಂತ್ರಜ್ಞಾನವಾದ ಚಾಟ್ ಜಿಪಿಟಿ ನೊಂದಣಿ ಮಾಡುವ ವಿಧಾನ ಮತ್ತು ಸಮರ್ಪಕವಾಗಿ ಚಾಟ್ ಜಿಪಿಟಿ ಬಳಕೆಯನ್ನು ತಿಳಿಸಿದರು. ಮೈಕ್ರೋಸಾಫ್ಟ್ ಎಕ್ಸೆಲ್, ಪವರ್ ಪಾಯಿಂಟ್, ಮೈಕ್ರೋಸಾಫ್ಟ್ ವರ್ಡ್‌ನಲ್ಲಿ ಆಗಿರುವ ಆಧುನಿಕ ಮಾರ್ಪಾಡುಗಳ ಕುರಿತು ವಿವರಣೆ ನೀಡಿದರು.

ಈ ಕಾರ್ಯಗಾರದಲ್ಲಿ ವಿಡಿಐಟಿ ಮಹಾವಿದ್ಯಾಲಯ ಹಾಗೂ ಕೆಎಲ್‌ಎಸ್ ಪಿಯುಸಿ ಮತ್ತು ಬಿಸಿಎ ಕಾಲೇಜಿನ 50ಕ್ಕೂ ಅಧಿಕ ಕಚೇರಿ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಕೆಎಲ್‌ಎಸ್ ಪಿಯು ಮತ್ತು ಬಿಸಿಎ ಕಾಲೇಜು ಪ್ರಾಚಾರ್ಯ ಶ್ರೀನಿವಾಸ ಪ್ರಭು, ಪ್ರೊ ಮಂಜುನಾಥ ಉಪಸ್ಥಿತರಿದ್ದರು. ಕೃತಕ ಬುದ್ಧಿಮತ್ತೆ ಮತ್ತು ಚಾಟ್ ಜಿಪಿಟಿ ಸಮರ್ಪಕವಾಗಿ ಬಳಕೆ ಮಾಡುವುದರಿಂದ ಕಚೇರಿ ಕೆಲಸ ದಕ್ಷತೆಯನ್ನು ಹೆಚ್ಚಿಸ ಬಹುದಾಗಿರುವುದರಿಂದ, ಇದರ ಕುರಿತು ಸಂಸ್ಥೆಯ ಕಚೇರಿ ಸಿಬ್ಬಂದಿಗಳಿಗೆ ಅರಿವು ಮೂಡಿಸಲು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು ಎಂದು ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ತಿಳಿಸಿದ್ದಾರೆ.